

ಬಣ್ಣ ಬಣ್ಣದ ಪಕ್ಷಿಗಳು ಕಾಂಬೋಡಿಯ, ಭೂತಾನ್, ಮ್ಯಾನ್ಮಾರ್, ಥೈಲ್ಯಾಂಡ್, ಮಲೇಶಿಯಾ, ವಿಯೆಟ್ನಾಂ ಕಡೆಯಿಂದ ಬರುತ್ತವೆ. ಕಣಿವೆಯಲ್ಲಿ ಪಕ್ಷಿಗಳ ಪಟ ತುಂಬಾ ಚೆನ್ನಾಗಿ ಮೂಡಿ ಬರುತ್ತದೆ. ಇದಕ್ಕೆ ಕಾರಣ ಹಿನ್ನೆಲೆಯಲ್ಲಿ ಸಿಗುವ ಹಸುರಿನ ರಾಶಿ. ಬ್ಯಾಕ್ ಡ್ರಾಪಿನಲ್ಲಿ ಬರುವ ಕಾಡು ದೂರದಲ್ಲಿ ಇದ್ದು ಚಿತ್ರದಲ್ಲಿ ಅದು ಒಂದು ಬಣ್ಣದ ಪರದೆಯಾಗುತ್ತದೆ. ಪಕ್ಷಿಗಳ ಪಟ ತೆಗೆಯುವವರಿಗೆ ಅಡ್ಡ ಬರುವ ರೆಂಬೆಕೊಂಬೆಗಳು ಸೊಪ್ಪುಸದೆಗಳು ಬಲು ತಲೆನೋವು ಕೊಡುತ್ತವೆ. ಎಷ್ಟೇ ಕಷ್ಟ ಬಿದ್ದು ತೆಗೆದರೂ ಉತ್ತಮ ಚಿತ್ರ ಸಿಕ್ಕದಂತೆ ಈ ಕಡಿಕಸಗಳು ಕಾಟ ಕೊಡುತ್ತವೆ. ಮಹಾನಂದದಲ್ಲಿ ಹಿನ್ನೆಲೆಯ ವೈಭವವೇ ಅದ್ಭುತ. ಬೆಟ್ಟದ ಎತ್ತರ ಹಾಗೂ ಅದೇ ಎತ್ತರಕ್ಕೆ ಸಮನಾಗಿ ಮರಗಳು ಇದ್ದು ನಡುವೆ ಖಾಲಿ ಜಾಗ ಹೆಚ್ಚಾಗಿರುವುದರಿಂದ ಪಕ್ಷಿಯನ್ನು ತುಂಬಾ ಚೆನ್ನಾಗಿ ಇಲ್ಲಿ ಸೆರೆ ಹಿಡಿಯಬಹುದು. ಹಾರುವ ಚಿತ್ರವನ್ನೂ ದಾಖಲಿಸಬಹುದು.

ಮಹಾನಂದದಲ್ಲಿ ಕಡಿಮೆ ಎಂದರೂ ಮುನ್ನೂರಕ್ಕೂ ಹೆಚ್ಚು ಪಕ್ಷಿಗಳು ಪಕ್ಷಿಗಳು ಸಿಗುತ್ತವೆ ಅವನತಿ ಸಂತತಿಯ ಹಾದಿಯಲ್ಲಿರುವ ಪಕ್ಷಿಗಳು ಕೂಡ ಇಲ್ಲಿಗೆ ಬರುತ್ತವೆ. ಇಡೀ ವರ್ಷದ ಋತುಮಾನದಲ್ಲಿ ಭಿನ್ನಭಿನ್ನವಾದ ಪಕ್ಷಿಗಳು ದಕ್ಕುತ್ತವೆ. ಅಂದರೆ ಪ್ರತಿ ಚಳಿಗಾಲ, ಬೇಸಿಗೆ ಮತ್ತು ಮಳೆಗಾಲದಲ್ಲಿ ಅಲ್ಲಿಗೆ ವಲಸೆ ಬರುವ ಪಕ್ಷಿಗಳು ಬೇರೆ ಬೇರೆಯಾಗಿರುತ್ತದೆ . ಗ್ರೇಟ್ ಹಾರ್ನ್ ಬಿಲ್ ಮಾತ್ರ ಅಲ್ಲೇ ಸ್ಥಳೀಯವಾಗಿ ವಾಸವಿರುವ ಪಕ್ಷಿ ಮಳೆಗಾಲದಲ್ಲಿ ಬಣ್ಣ ಬಣ್ಣದ ಮಲ್ಕೋವಾ ಪಕ್ಷಿಗಳು ಸಿಗುತ್ತವೆ. ಹಾಗೆಯೇ ಇನ್ನೊಂದು ಮಾಂಸಾಹಾರಿ ಪಕ್ಷಿ ಬ್ಲಾಕ್ ಬಝ ಎಂಬುದು ನಾವು ಹೋದಾಗ ಸಿಕ್ಕಿತು. ಇದು ಚೀನಾ ಮತ್ತು ದಕ್ಷಿಣ ಏಷ್ಯಾದಿಂದ ವಲಸೆ ಬಂದು ಇಲ್ಲಿ ಗೂಡು ಕಟ್ಟುತ್ತದೆ. ಮರಿ ಮಾಡಿಕೊಂಡು ಅದಕ್ಕೆ ತಿನಿಸಿ ಸಾಕಿ ಮತ್ತೆ ವಾಪಸ್ ಕರಕೊಂಡು ಹೋಗುತ್ತದೆ. ತನ್ನ ಪಕ್ಷಿಗಳನ್ನು ಸಾಕಲು ಹುಳ ಹುಪಟೆಗಳ ಜೊತೆಗೆ ಬೇರೆ ಸಣ್ಣಪುಟ್ಟ ಪಕ್ಷಿಗಳನ್ನು ಬೇಟೆಯಾಡುತ್ತದೆ. ಎತ್ತರದ ಮರಗಳ ಮೇಲೆ ಗೂಡು ಕಟ್ಟುವ ಇವು ಹೊಸ ಜಾಗಕ್ಕೆ ಬಂದಾಗ ಹೆಚ್ಚು ಜಾಗರೂಕ ಸ್ವಭಾವದಿಂದ ಇರುತ್ತದೆ. ಇಲ್ಲಿ ಹಂಗೋ ಏನೋ ಎಂಬ ಗುಮಾನಿ ಇದ್ದದ್ದೇನೆ. ಹಿಂಜರಿಕೆ ಸ್ವಭಾವದ ಇವು ತೀರ ಹತ್ತಿರಕ್ಕೆ ನಮ್ಮನ್ನು ಬಿಟ್ಟುಕೊಳ್ಳುವುದಿಲ್ಲ. ಸಾಧ್ಯವಾದಷ್ಟು ದೂರ ದೂರದಿಂದಲೇ ಓಡಾಡಿಕೊಂಡಿರುತ್ತವೆ. ಬ್ಲಾಕ್ ಬಝ ನಾವಿಲ್ಲಿ ನೋಡಿದ ಸುಂದರ ಪಕ್ಷಿ. ಹಾಳಾದ್ದು ಒಂದು ಪೋಸು ಕೊಡಲು ಇಡೀ ದಿನ ಗೋಳಾಡಿಸಿತು.

ಕಾಡಿನ ತೀರಾ ಒಳಗೆ ಹೋದಾಗ ಅಲ್ಲೊಂದು ಸುಂದರ ಶಿವ ದೇವಾಲಯ ಸಿಕ್ಕಿತು. ಪಕ್ಕದಲ್ಲಿ ಹರಿಯುವ ತಿಳಿ ನದಿ. ವಿರಳವಾಗಿ ಭಕ್ತರು ಬಂದು ಹೋಗುತ್ತಿದ್ದರು. ಅಲ್ಲೇ ಇದ್ದ ಪುಟಾಣಿ ಕ್ಯಾಂಟೀನ್ ನಲ್ಲಿ ಸ್ಥಳೀಯ ಬೇಯಿಸಿದ ಶ್ಯಾವಿಗೆ ಮತ್ತು ಮೋಮೋಸ್ ಸಿಕ್ಕುತ್ತಿದ್ದವು. ನಮ್ಮ ಫೆವರೇಟ್ ಆಂಟಿ ಕ್ಯಾಂಟೀನ್‌ಗೆ ಬಂದು ಹೋಗಿ ಉಂಡು ಬರಲು ಅನೇಕ ಗಂಟೆಗಳು ವ್ಯರ್ಥವಾಗುತ್ತಿದ್ದವು. ಹೀಗಾಗಿ ನಾಳೆ ತನಕ ಇಲ್ಲೇ ಠಿಕಾಣಿ ಹೂಡುವುದೆಂದೂ; ಸಿಕ್ಕಿದ್ದು ನುಂಗಿ ಕಾಲ ಹಾಕುವೆಂದೂ; ಇದೇ ಸಮಯದಲ್ಲಿ ಮಧುರ ಶಿಳ್ಳಿನ ಚೆಸ್ ನೆಟ್ ವಿಂಗ್ಡ್ ಕುಕೂ ಎಂಬ ಪಕ್ಷಿ ಬಿಡದೆ ಹುಡುಕುವುದೆಂದು ಒಮ್ಮತ ಅಭಿಪ್ರಾಯ ತಾಳಿದೆವು.